ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ:ರವರ ನ್ಯಾಯಾಲಯ: ಕೊಪ್ಪ

ಸಿ.ಸಿ.ನಂ. 465/2023

ಸಾಕ್ಷಿಯ ಹೆಸರು: ಶ್ರೀಮತಿ.ಜಿ ಎಂ ಕಲಾವತಿ ಚಾಸಾ: 4

ಗಂಡನ ಹೆಸರು: ದಿ:ಓಂಕಾರ್ ಮೂರ್ತಿ ಪ್ರಾಸಾ: 2

ವಯಸ್ಸು: 43 ವರ್ಷ
ಉದ್ಯೋಗ: ಮುಖ್ಯ ಮಹಿಳ ಪೇದೆ., ಜಯಪುರ ಪೊಲೀಸ್ ಠಾಣೆ.
ವಾಸ: ಜಯಪುರ.

ದಿನಾಂಕ: 12/09/2025 ರಂದು ಪ್ರಮಾಣವಚನ ಬೋಧಿಸಲಾಯಿತು.

:: ಮುಖ್ಯ ವಿಚಾರಣೆ:: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ::

ನಾನು ಜಯಪುರ ಪೋಲಿಸ್ ಠಾಣೆಯಲ್ಲಿ ಸುಮಾರು 4 ವರೆ ವರ್ಷಗಳಿಂದ ಮುಖ್ಯ ಮಹಿಳ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08.09.2022 ರಂದು ಚಾಸಾ 1 ರವರು ಜಯಪುರ ಪೊಲೀಸ್ ಠಾಣೆಯಲ್ಲಿರುವಾಗ ಬೆಳಿಗ್ಗೆ 08.30 ರ ಸಮಯಕ್ಕೆ ಪೊಲೀಸ್ ಬಾತ್ಮಿದಾರರಿಂದ ಎಲೆಮಡಲು ಗ್ರಾಮದ ಶಾಂತಿಪುರವಾಸಿ ಶರೀಫ್ ಎಂಬುವರ ಮನೆಯಲ್ಲಿ ಅಕ್ರಮವಾಗಿ ದನದ ಮಾಂಸವನ್ನು ಮಾರಾಟ ಮಾಡುವ ಮಾಹಿತಿ ಬಂದಿದ್ದು ಸದರಿ ದಾಳಿಗೆ ನಾನು ಚಾಸಾ 1 ರವರ ಜೊತೆ ಇಲಾಖಾ ಜೀಪ್ ಕೆಎ- 18 ಜಿ 891 ರಲ್ಲಿ 09.15 ರ ಸಮಯಕ್ಕೆ ಠಾಣೆಯನ್ನು ಬಿಟ್ಟು ಹೊರಟಿರುತ್ತೇನೆ. ನಂತರ ಶಾಂತಿಪುರಕ್ಕೆ ಬಂದ ಶಾಂತಿ ಪುರದ ಸೇತುವೆ ಬಳಿ ಇದ್ದ ಚಾಸಾ2 ಮತ್ತು 3 ರವರನ್ನು ಕರೆದು ಸಾಕ್ಷಿಯನ್ನು ನೀಡುವಂತೆ ಕೇಳಿ ಪೊಲೀಸ್ ಲಿಖಿತ ನೋಟೀಸನ್ನು ಜಾರಿ ಮಾಡಿ ಅವರನ್ನು ಕರೆದುಕೊಂಡು ಶಾಂತಿ ಪುರದಿಂದ ಸ್ವಲ್ಪ ಮುಂದೆ ನಮ್ಮ ವಾಹನವನ್ನು ನಿಲ್ಲಿಸಿ ಹತ್ತಿರ ಇರುವ ಶರೀಫ್ ರವರ ಮನೆಗೆ ನಡೆದುಕೊಂಡು ಹೋಗಿ ಮನೆ ಮುಂದೆ ಶರೀಫ್ ಎಂದು ಕೂಗಿ ಕರೆದಾಗ ಅಲ್ಲಿ ಒಬ್ಬ ಆಸಾಮಿಯು ಇದು ಶರೀಫ್ ಮನೆಯನ್ನು ವಿಚಾರಿಸಲಾಗಿ ಆತನ ಹೆಸರು ವಿಳಾಸ ಕೆಳಲಾಗಿ ಶರೀಫ್ ಬಿನ್ ಆಲಿಯಬ್ಬ ಎಲೆಮಡಲು ಗ್ರಾಮ ಎಂದು ತಿಳಿಸಿರುತ್ತಾರೆ. ಅವರಿಗೆ ಶೋಧನ ವಾರಟನ್ನು ತೋರಿಸಿ ಪಂಚರು ಹಾಗೂ ಸಿಬ್ಬಂದಿಯವರೊಡನೆ ಮನೆಯನ್ನು ಶೋಧಿಸುತ್ತಿರುವಾಗ ಮನೆಯ ಅಡುಗೆ ಮನೆಯಲ್ಲಿ ಒಂದು ಪ್ಲಾಸ್ಟಿಕ್ ಬುಟ್ಟಿ, ಒಂದು

ಟಬ್ಬು, ಒಂದು ಪ್ಲಾಸ್ಟಿಕ್ ಬಕೆಟ್ ನಲ್ಲಿ ಯಾವುದೋ ಪ್ರಾಣಿ ಯ ಮಾಂಸವನ್ನು ತುಂಬಿಟ್ಟಿರುವುದು ಕುಂಡುಬಂತು. ಸದರಿ ಶರೀಫ್ ರವರನ್ನು ಯಾವ ಪ್ರಾಣಿಯ ಮಾಂಸ ಎಂದು ವಿಚಾರ ಮಾಡಲಾಗಿ ಅದು ದನದ ಮಾಂಸ ಎಂದು ತಿಳಿಸಿರುತ್ತಾನೆ. ಸದರಿ ಶರೀಫ್ ಈತನು ಇದು ಪ್ರಕಾಶ್ ಎಂಬುವರ ಹತ್ತಿರ 3,000/- ಹಣ ಒಂದು ಎತ್ತಿನ ಗುಡ್ಡವನ್ನು ಖರೀದಿ ಮಾಡಿ ಅದನ್ನು ದಿನಾಂಕ 07.09.2022 ರಂದು ರಾತ್ರಿ 11.00 ಗಂಟೆಯಲ್ಲಿ ರವಿನಗರ ಹತ್ತಿರ ಇರುವ ಕಾಡಿನಲ್ಲಿ ನಾನು ಮತ್ತು ರಮೇಶ ಹಮೀದ್ ಹಾಗೂ ವಸಂತ ಎಂಬುವರ ಜೊತೆ ಸೇರಿ ಅದನ್ನು ಕಡಿದು ಮಾಂಸವಾಗಿ ಪರಿವರ್ತಿಸಿ 2 ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿಕೊಂಡು ನನ್ನಬಾಬ್ತು ಕೆಎ 20 ಎಂ 3474 ಸ್ಕೂಟಿಯಲ್ಲಿ ತೆಗೆದುಕೊಂಡು ಮನೆಯಲ್ಲಿ ತುಂಬಿಸಿ ಇಟ್ಟಿದ್ದ ಬುಟ್ಟಿ, ಬಕೇಟ್ ಹಾಗೂ ಟಬ್ಬಿನಲ್ಲಿ ತುಂಬಿಸಿ ಸದರಿ ಚೀಲವನ್ನು ಮನೆಯ ಹಿಂಭಾಗದ ನೀರಿನಲ್ಲಿ ಹಾಕಿದ್ದು 1 ಕೆ ಜಿ ಗೆ 250/- ರಂತೆ ಮಾರಾಟ ಮಾಡುವುದಾಗಿ ತಿಳಿಸಿದ್ದು ಸದರಿಯವರಿಗೆ ಮಾಂಸವನ್ನು ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ ಇಲ್ಲ ಎಂದು ನುಡಿದಿರುತ್ತಾರ ಸದರಿ ಸ್ಥಳನ್ನು ಜಮಾಯಿಸಿ ನೋಡಲಾಗಿ ಅದು ಶರೀಫ್ ರವರ ಅಡುಗೆ ಮನೆ ಯಾಗಿದ್ದು ಅದು 10*12 ಅಡಿ ವಿಸ್ತೀರ್ಣ ಆಗಿರುತ್ತದೆ ಅದರ ಮಾಡು ಮಂಗಳೂರು ಹಂಚಿನಿಂದ ಕೂಡಿರುತ್ತದೆ. ನಮ್ಮ ಇಲಾಖಾ ವಾಹನ ಚಾಲಕ ಪ್ರಸನ್ನರವರಿಗೆ ತೂಕದ ಯಂತ್ರವನ್ನು ತೆಗೆದುಕೊಂಡು ಬರಲು ಹೇಳಿ ಅವರು ಅದನ್ನು ತಂದು ಸದರಿ ಮಾಂಸವನ್ನು ತೂಕ ಮಾಡಲಾಗಿ ಬುಟ್ಟಿಯಲ್ಲಿ 20 ಕೆ ಜಿ 140 ಗ್ರಾಂ ಹಾಗೂ ಟಬ್ಬಿನಲ್ಲಿ ಇದ್ದ ಮಾಂಸವನ್ನು ತೂಕ ಮಾಡಲಾಗಿ 42 ಕೆ ಜಿ 970 ಗ್ರಾಂ ನಂತರ ಬಕೇಟ್ ನಲ್ಲಿ ಇದ್ದ ಮಾಂಸವನ್ನು ತೂಕ ಮಾಡಲಾಗಿ 13 ಕೆ ಜಿ 140 ಗ್ರಾಂ ಒಟ್ಟು 76 ಕೆ ಜಿ 250 ಗ್ರಾಂ ಆಗಿರುತ್ತದೆ ಅದರ ಬೆಲೆ 19,000/- ಆಗಿರುತ್ತದೆ ಎಂದು ಪಂಚರು ತಿಳಿಸಿರುತ್ತಾರೆ. ನಂತರ ಸದರಿ ಎಲ್ಲಾ ಬೆಕೆಟುಗಳಿಗೆ ನನ್ನ ಹಾಗೂ ಪಂಚರ ಸಹಿ ಇರವ ಚೀಟಿಯನ್ನು ಅಂಟಿಸಲಾಯಿತು. ಈ ಮಹಜರನ್ನು 10.10 ರಿಂದ 12.10 ರವರೆಗೆ ಬರೆಯಲಾಗಿರುತ್ತದೆ. ಸಂದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ನಿಪಿ.4 ಮತ್ತು 5 ಅನು ಸಾಕ್ಷಿ ಗುರುತಿಸುತ್ತಾರೆ.

ಮು ಮಾಲು1 ರಿಂದ 3 ಅನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

(ನ್ಯಾಯಾಲಯದ ಮುಂದೆ 1 ರಿಂದ 4 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಪರವಾಗಿ ಅವರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ಯಾವುದೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

ಪಾಟೀ ಸವಾಲುಃ ಆರೋಪಿಗಳ ಪರ ಃ ಶ್ರೀ ಕೆ ಎಸ್ ಎಸ್ ವಕೀಲರಿಂದಃ

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 2 ಮತ್ತು 3 ರಲ್ಲಿ ಮರಳು ತುಂಬಿರುವ ನಿಶಾನೆ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ಪಾತ್ರೆ ಅಥವಾ ಪ್ಲಾಸ್ಟಿಕ್

ವಸ್ತುಗಳಲ್ಲಿ ಮಾಂಸವನ್ನು ಇಟ್ಟರೆ ರಕ್ತದ ಕಲೆ ಇರುತ್ತದೆ ಎಂದರೆ ಸರಿ. ಮುದ್ದೆ ಮಾಲು 1 ರಿಂದ 3 ರಲ್ಲಿ ಯಾವುದೆ ರಕ್ತದ ಕಲೆ ಕಾಣುತ್ತಿಲ್ಲ ಎಂದರೆ ಸರಿ. ಮಣ್ಣು ಹಾಗೂ ಮರಳಿಂದ ಕೂಡಿರುತ್ತದೆ ಎಂದರೆ ಸರಿ. ಚಾಸಾ 2 ಮತ್ತು 3 ರವರು ಶಾಂತಿಪುರದ ಸೇತುವೆಯ ಬಳಿ ಇದ್ದವರನ್ನು ಪಂಚರಾಗಿ ಬರಮಾಡಿಕೊಂಡಿರುತ್ತೇವೆ. ಚಾಸಾ 1 ರವರು ಚಸಾ 2 ಮತ್ತು 3 ರವರನ್ನು ಸಾಕ್ಷಿಗಳಾಗಿ ಕರೆದಿರುತ್ತಾರೆ. ಶಾಂತಿಪುರ ಸಾಕಷ್ಟು ಜನಜಂಗುಳಿ , ಹಾಗೂ ಅಂಗಡಿಗಳು ಬ್ಯಾಂಕು , ಮನೆಗಳು ಇರುವ ಸ್ಥಳ ಎಂದರೆ ಸರಿ.

ಆರೋಪಿಯ ಮನೆಯನ್ನು ನಿಮಗೆ ಯಾರು ತೋರಿಸಿರುತ್ತಾರೆ ಎಂದರೆ ಚಾಸಾ 1 ರವರು ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು ಎನ್ನುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಬ್ಯಾಂಕ್ ಇದ್ದು ಸದರಿ ಬ್ಯಾಂಕ್ ಕೆನರಾ ಬ್ಯಾಂಕ್ ಆಗಿರುತ್ತದೆ. ಬ್ಯಾಂಕಿಗೆ ಬಂದ ಗ್ರಾಹಕರು ಇದ್ದರೆ ಎಂದರೆ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಬ್ಯಾಂಕ್ ತೆಗೆದಿತ್ತೆ ಎಂದು ನಾನು ನೋಡಿರುವುದಿಲ್ಲ ಎನ್ನುತ್ತಾರೆ. ನಿಪಿ.4 ಮತ್ತು 5 ರಲ್ಲಿ ನಾನು ಕಾಣುತ್ತಿಲ್ಲಎಂದರೆ ಸರಿ. ಸದರಿ ನಿಪಿ.4 ಮತ್ತು 5 ರಲ್ಲಿ ನಿಲ್ಲಲು ನನಗೆ ಏನೂ ಸಮಸ್ಯೆ ಇರಲಿಲ್ಲ ಎಂದರೆ ನಾನು ಮಹಜರನ್ನು ಬರೆಯುತ್ತಿದ್ದೆ ಎನ್ನುತ್ತಾರೆ. ಸದರಿ ಮಹಜರನ್ನು ಆರೋಪಿಯ ಮನೆಯ ಅಡಿಗೆ ಮನೆಯ ಬಾಗಿಲಿನಲ್ಲಿ ಬರೆಯುತ್ತಿದ್ದೆ. ಸದರಿ ಅಡಿಗೆ ಮನೆ ಬಾಗಿಲು ನಿಪಿ.4 ಹಾಗೂ 5 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ.

ನಾವು ಸ್ಥಳಕ್ಕೆ ಹೋದೆವು ಎನ್ನಲಾದ ಸಮಯದಲ್ಲಿ ಮಾಂಸವನ್ನು ಖರೀದಿ ಮಾಡುವ ಗ್ರಾಹಕರು ಇರಲಿಲ್ಲ. ಸದರಿ ಮಾಂಸವನ್ನು ಮಾರಾಟ ಮಾಡಲು ಬಳಸುವ ಚಿಕ್ಕ ಬ್ಯಾಗ್ ಗಳು ಸ್ಥಳದಲ್ಲಿ ಕಂಡುಬಂದಿರುವುದಿಲ್ಲ. ಸದರಿ ಅಡಿಗೆ ಮನೆಯ ಕೋಣೆಯಲ್ಲಿ ಯಾವುದೇ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ಸದರಿ ಮನೆಯಲ್ಲಿ ಒಟ್ಟು ಎಷ್ಟು ಕೋಣೆಗಳು ಇದ್ದವು ಎಂದರೆ 4-5 ಕೋಣೆಗಳು ಇದ್ದವು ಎನ್ನುತ್ತಾರೆ. ಸದರಿ ಮನೆ ಹೆಂಚಿನ ಮನೆಯಾಗಿತ್ತು. ಸದರಿ ಮನೆಯಲ್ಲಿ ಆ ಸಮಯದಲ್ಲಿ ಒಟ್ಟು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಅಕ್ಕಪಕ್ಕದ ಮನೆಯವರನ್ನು ನಾನಾಗಲೀ, ಚಾಸಾ 1 ರವರಾಗಲೀ ವಿಚಾರ ಮಾಡಿರುವುದಿಲ್ಲ. ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ತೂಕದ ಯಂತ್ರವನ್ನು ತರಿಸಲಾಯಿತು ಎಂದು ನುಡಿದಿದ್ದು ಸದರಿ ಯಂತ್ರವನ್ನು ಚಾಸಾ 1 ರವರು ಇಲಾಖಾ ಜೀಪ್ ಚಾಲಕನ ಮೂಲಕ ತರಿಸಿದ್ದರು. ಸದರಿ ತುಕದ ಯಂತ್ರವನ್ನು ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಯಂತ್ರ ಯಾರಿಗೆ ಸೇರಿದ್ದು ಎಂದು ನಿಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ.

ಮುದ್ದೆ ಮಾಲುಗಳ ಮೇಲೆ ಇಲಾಖಾ ಚೀಟಿ ಮೊಹರು ಇಲ್ಲದೇ ಇರುವುದರಿಂದ ಸದರಿ ದಿನ ವಶಕ್ಕೆ ಪಡೆದ ವಸ್ತುಗಳೇ ಮು ಮಾಲು 1 ರಿಂದ 3 ಆಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ನಕಾಶೆಯನ್ನು ಯಾರು ತಯಾರಿಸಿರುತ್ತಾರೆ ಎಂದರೆ ನಾನೆ ತಯಾರಿಸಿರುತ್ತೇನೆ. ಸದರಿ ನಕಾಶೆಯಲ್ಲಿ ಒಟ್ಟಾರೆಯಾಗಿ 9 ಕೊಠಡಿಗಳು ಕಾಣುತ್ತವೆ ಎಂದರೆ ಸಾಕ್ಷಿ ನಿಪಿ.1 ಅನ್ನು ಪರಿಶೀಲಿಸಿ ಇರಬಹುದು ಎನ್ನುತ್ತಾರೆ. ಸದರಿ ಮಾಂಸವನ್ನು ಅಡಿಗೆ ಕೋಣೇಯ ಮದ್ಯಭಾಗದಲ್ಲಿ ಇಡಲಾಗಿತ್ತು. ಮೊದಲಿಗೆ ಸದರಿ ಮನೆಯನ್ನು ಚಾಸಾ 1 ರವರು ಪ್ರವೇಶಿಸಿದ್ದು ನಂತರ ನಾವು ಮನೆ ಒಳಗೆ ಹೋಗಿರುತ್ತೇವೆ. ಚಾಸಾ 2 ಮತ್ತು 3 ರವರು ಸ್ಥಳೀಯರಲ್ಲ ಎಂದರೆ ಸರಿ.

ನಾವುಸ್ಥಳಕ್ಕೆ ಹೋಗಿ ದಾಳಿ ಮಾಡಿದೆವು ಎನ್ನಲಾದ ಸಮಯದಲ್ಲಿ ಅಕ್ಕಪಕ್ಕದ ಮನೆಯವರು , ಬ್ಯಾಂಕ್ ಸಿಬ್ಬಂದಿಗಳು ಕುತೂಹಲಕ್ಕಾಗಿ ಬಂದು ಗಮನಿಸಿರುವುದಿಲ್ಲ.

ಆರೋಪಿ ಅನಾರೋಗ್ಯದಿಂದ ಓಡಾಡಲು ಸಾಧ್ಯ ವಿಲ್ಲದ ವ್ಯಕ್ತಿ ಎಂದರೆ ಸರಿಯಲ್ಲ. ಈಗ 6-7 ವರ್ಷಗಳಿಂದ ಸ್ವಲ್ಪ ಓಡಾಡುತ್ತಾರೆ ಎಂದರೆ ಅವರ ಆರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ. ನೀವು ಬರೆದಿರಿ  ಎನ್ನಲಾದ ಮಹಜರ್ ಎಷ್ಟು ಪುಟಗಳಲ್ಲಿತ್ತು ಎಂದರೆ ನನಗೆ ನೆನಪಿಲ್ಲ. ಸದರಿ ಮಹಜರಿನ ಯಾವ ಯಾವ ಪುಟಗಳಲ್ಲಿ ಏನೇನು ಬರೆದಿದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ.

ನಾನು ದಾಳಿಗೆ ಹೋಗಿರಲಿಲ್ಲ ಹಾಗೂ , ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.  ಮು ಮಾಲಿಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ ಮೇಲಾಧಿಕಾರಿಗಳು ಸೃಷ್ಟಿಸಿದ ಸುಳ್ಳು ಕೇಸಿಗೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಕರಣಕ್ಕಾಗಿ ಹೇಳಿಕೆಯನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ದಿನಾಂಕಃ12/09/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

Sd/-

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ  ಕೊಪ್ಪ.

ಸಾಕ್ಷಿಯ ಸಹಿಃ